# ಪಂಟರ್ ಬಟ್ಲರ್

**ವಿರಾಟ್ ಕೊಹ್ಲಿ ಹಾಗೂ ಮಹೇಂದ್ರ ಸಿಂಗ್ ಧೋನಿ ಅವರ ಸಮೀಕರಣ ಎಂದು ಹಿಂದೊಮ್ಮೆ ಬಟ್ಲರ್ ಅವರನ್ನು ನಾಸಿರ್ ಹುಸೇನ್ ಕೊಂಡಾಡಿದ್ದರು. ಆ ಮಾತನ್ನು ನಿಜವಾಗಿಸುವಂತೆ ಬಟ್ಲರ್ ಈಗ ಬ್ಯಾಟ್ ಬೀಸುತ್ತಿದ್ದಾರೆ.**

■ ಎನ್ವಿ

2019ರ ವಿಶ್ವಕಪ್ ಫೈನಲ್ ನಡೆದ ಹಿಂದಿನ ದಿನ ರಾತ್ರಿ ಜಾಸ್ ಬಟ್ಲರ್‌ಗೆ ಸರಿಯಾಗಿ ನಿದ್ದೆ ಹತ್ತಲಿಲ್ಲ. ಅದುವರೆಗೆ ಅವರು ಆಡಿದ್ದ ವಿವಿಧ ಮಾದರಿಯ ಎಂಟು ಫೈನಲ್‌ಗಳಲ್ಲಿ ಏಳನ್ನು ಇಂಗ್ಲೆಂಡ್ ತಂಡ ಸೋತಿತ್ತು. ಮರುದಿನವೂ ಸೋಲೇ ಗತಿಯಾದರೆ ಇನ್ನು ಮುಂದೆ ಕ್ರಿಕೆಟ್ ಬ್ಯಾಟ್ ಹಿಡಿಯುವುದಾದರೂ ಹೇಗೆ ಎಂಬ ಚಿಂತೆ. ಸೋತರೆ ಕ್ರಿಕೆಟ್‌ಗೆ ತಿಲಾಂಜಲಿ ಇಟ್ಟಂತೆಯೇ ಎಂದು ಅವರ ಮನಸ್ಸು ತಲ್ಲಣಿಸುತ್ತಿತ್ತು.

ಫೈನಲ್ ಪಂದ್ಯದಲ್ಲಿ ನ್ಯೂಜಿಲೆಂಡ್ ಆತ್ಮವಿಶ್ವಾಸದ ಊಟೆಯಂತೆ ಇತ್ತು. ಒಂದು ಕಡೆ ಬಂಡೆಯಂಥ ಬೆನ್ ಸ್ಟೋಕ್ಸ್. ಇಂಗ್ಲೆಂಡ್ 242 ರನ್‌ಗಳ ಗುರಿಯನ್ನಷ್ಟೇ ಬೆನ್ನುಹತ್ತಿತ್ತಾದರೂ 24ನೇ ಓವರ್ ಹೊತ್ತಿಗೆ 86 ರನ್ ಗಳಿಸಿ ನಾಲ್ಕು ವಿಕೆಟ್‌ಗಳನ್ನು ಕಳೆದುಕೊಂಡಿತ್ತು. ನಾಯಕ ಇಯಾನ್ ಮಾರ್ಗನ್ ಬರೀ 9 ರನ್ ಗಳಿಸಿ ಔಟಾದಾಗ ಬಟ್ಲರ್ ಮೇಲಿನ ನಿರೀಕ್ಷೆಯ ಭಾರ ಇನ್ನೂ ಹೆಚ್ಚಾಗಿತ್ತು. ಸ್ಟೋಕ್ಸ್ ಹಾಗೂ ಬಟ್ಲರ್ ಇಬ್ಬರೂ ಸ್ಟ್ರೋಕ್ ಪ್ಲೇಯರ್‌ಗಳು. ಹೀಗಾಗಿ ನೆಚ್ಚಿಕೊಳ್ಳುವ ಬ್ಯಾಟರ್‌ಗಳೆನಿಸಿಕೊಂಡಿರಲಿಲ್ಲ. ಆ ದಿನ ಇಬ್ಬರೂ ಅವುಡುಗಚ್ಚಿದರು. ಪಾಕಿಸ್ತಾನದ ಎದುರು ಒಂದು ಶತಕ ಗಳಿಸಿದ್ದು ಬಿಟ್ಟರೆ ಬಟ್ಲರ್ ಆ ವಿಶ್ವಕಪ್‌ನ ಉಳಿದ ಪಂದ್ಯಗಳಲ್ಲಿ ರನ್ ಗಳಿಸಲು ಪರದಾಡಿದ್ದರು. ಹಿಂದಿನ ದಿನ ನಿದ್ದೆಗೆಡಲು ಅದೂ ಒಂದು ಕಾರಣ. ಸ್ಟೋಕ್ಸ್ ಜತೆಗಿನ ತಾಳಮೇಳದಿಂದಾಗಿ ನಿಧಾನಕ್ಕೆ ಆಟಕ್ಕೆ ಕುದುರಿಕೊಂಡರು. 6 ಬೌಂಡರಿಗಳಿದ್ದ 59 ರನ್ ಕಲೆಹಾಕಿದರು. 60 ಎಸೆತಗಳನ್ನಷ್ಟೇ ಆಡಿ ಒತ್ತಡವನ್ನು ಮೆಟ್ಟಿದ್ದು ಅವರ ಸಹಜವಾದ ಸ್ಟ್ರೋಕ್ ಪ್ಲೇಗೆ ಹಿಡಿದ ಕನ್ನಡಿ. ಒತ್ತಡದಲ್ಲೇ ಹಾಗೆ ಆಡಬಲ್ಲರಾದರೆ, ಲೀಲಾಜಾಲವಾಗಿದ್ದಾಗ ಆಟ ಹೇಗಿದ್ದಿರಬೇಡ.

ಸ್ಟೋಕ್ಸ್ ಜತೆಗಿನ 110 ರನ್‌ಗಳ ಜತೆಯಾಟದಿಂದಾಗಿ ಇಂಗ್ಲೆಂಡ್‌ಗೆ ಆ ಪಂದ್ಯದಲ್ಲಿ ಜೀವಾನಿಲ ದೊರೆತಂತಾಯಿತು. ಪಂದ್ಯ ಟೈ ಆಗಿ, ಆಮೇಲೆ ಸೂಪರ್ ಓವರ್‌ನಲ್ಲಿ ಇಂಗ್ಲೆಂಡ್ ಗೆದ್ದು ನಗೆ ಬೀರಿದ ಕ್ಷಣಗಳು ಈಗಲೂ ಕಣ್ಣಿಗೆ ಕಟ್ಟಿದ ಹಾಗಿವೆ.

ಈ ಸಲ 'ಐಪಿಎಲ್' ಟ್ವೆಂಟಿ20 ಕ್ರಿಕೆಟ್ ಟೂರ್ನಿಯಲ್ಲಿ ಅತಿ ಹೆಚ್ಚು ರನ್ ಗಳಿಸಿದವರ ಯಾದಿಯಲ್ಲಿ ಬಟ್ಲರ್ ಮೊದಲ ಸ್ಥಾನದಲ್ಲಿದ್ದಾರೆ. ಆಫ್‌ಸ್ಟಂಪ್‌ನ ದಿಕ್ಕಿನಿಂದ ಒಂದೆರಡು ಹೆಜ್ಜೆ ಮುಂದೆ ಬಂದು, ಆ ಲೈನ್‌ನಲ್ಲಿ ಬರುವ ಎಸೆತಗಳನ್ನು ವಿಕೆಟ್‌ನ ಹಿಂಬದಿಗೆ ಲೀಲಾಜಾಲವಾಗಿ ಆಡುವ ವಿಶೇಷ ಪ್ರದರ್ಶನವನ್ನು ಅವರು ನೀಡುತ್ತಿದ್ದಾರೆ. ನೆಟ್ಸ್‌ನಲ್ಲಿ ಇಂತಹ ಸ್ಟ್ರೋಕ್ ಪ್ಲೇಗೆ ಸಾಕಷ್ಟು ಅಭ್ಯಾಸ ಮಾಡಿರಬೇಕು. ಬೌಲರ್‌ಗಳು ಜಾಣತನದಿಂದ ಚೆಂಡಿನ ವೇಗವನ್ನು ತಗ್ಗಿಸುವ ಕುರಿತೂ ಅಂದಾಜಿದ್ದರಷ್ಟೆ ಇಂತಹ ಹೊಡೆತಕ್ಕೆ ಕೈಹಾಕಿ, ಯಶಸ್ವಿಯಾಗಲು ಸಾಧ್ಯ.

ಬಟ್ಲರ್ ಹನ್ನೊಂದು ವರ್ಷಗಳಿಂದ ಅಂತರರಾಷ್ಟ್ರೀಯ ಕ್ರಿಕೆಟ್ ಆಡುತ್ತಿದ್ದಾರೆ. ಮೊದಲಿಗೆ ಅವರು ಆಡಿದ್ದು ಟ್ವೆಂಟಿ20 ಮಾದರಿಯಲ್ಲೇ. ಆಮೇಲೆ ಏಕದಿನ ಪಂದ್ಯಗಳ ತಂಡದ ಭಾಗವಾದರು. 2014ರವರೆಗೆ ಟೆಸ್ಟ್ ಆಡುವ ಅವಕಾಶ ಅವರಿಗೆ ಸಿಗಲಿಲ್ಲ. ಕೆಂಪು ಚೆಂಡಿನಲ್ಲಿ ಆಡುವ ಗುಣ ಅವರಿಗೆ ಇಲ್ಲ ಎಂದೇ ಆಯ್ಕೆಗಾರರು ನಿರ್ಧರಿಸಿದ್ದರು. ಮಧ್ಯಮ ಕ್ರಮಾಂಕದ ಆಟಗಾರನಾಗಿ ಒಂದಿಷ್ಟು ದೊಡ್ಡ ಹೊಡೆತಗಳನ್ನು ಹೊಡೆದರೆ ತಮ್ಮ ಜವಾಬ್ದಾರಿ ಮುಗಿಯಿತು ಎನ್ನುವಂತೆ ಅವರು ಮೊದಲಿನಿಂದ ಆಡುತ್ತಾ ಬಂದವರು. 148 ಏಕದಿನ ಪಂದ್ಯಗಳಲ್ಲಿ 118.7ರ ಸ್ಟ್ರೈಕ್ ರೇಟ್‌ನಲ್ಲಿ 3872 ರನ್‌ಗಳನ್ನು ಅವರು ಹೆಕ್ಕಿರುವುದೇ ಇದಕ್ಕೆ ಸಾಕ್ಷಿ. 88 ಟ್ವೆಂಟಿ20 ಅಂತರರಾಷ್ಟ್ರೀಯ ಪಂದ್ಯಗಳಲ್ಲಿ 141.2ರ ಸ್ಟ್ರೈಕ್ ರೇಟ್ ಅವರದ್ದು. ಐಪಿಎಲ್ ಆಡಲು ಪ್ರಾರಂಭಿಸಿ ಐದು ವರ್ಷಗಳಾಗಿವೆ. 77 ಪಂದ್ಯಗಳಿಂದ 2593 ರನ್‌ಗಳನ್ನು ಮೇ 12ರವರೆಗೆ ಗಳಿಸಿದ್ದು, 150ಕ್ಕೂ ಹೆಚ್ಚಿನ ಸ್ಟ್ರೈಕ್ ರೇಟ್ ಅವರದ್ದಾಗಿದೆ. ಈ ಸಲ 12 ಪಂದ್ಯಗಳಲ್ಲೇ ಅವರು 625 ರನ್ ಸೇರಿಸಿದ್ದಾರೆ. ಮೂರು ಶತಕಗಳು ಅದರಲ್ಲಿರುವುದು ವಿಶೇಷ.

ಬಟ್ಲರ್ ಈ ಐಪಿಎಲ್‌ನಲ್ಲಿ 116 ರನ್ ಗಳಿಸಿದ ಇನಿಂಗ್ಸ್‌ನ ಸ್ಟ್ರೈಕ್ ರೇಟ್ 178.46. ಆಮೇಲೆ ಇನ್ನೊಂದು ಇನಿಂಗ್ಸ್‌ನಲ್ಲಿ 103 ಗಳಿಸಿದಾಗ 168.85ರ ಸ್ಟ್ರೈಕ್ ರೇಟ್‌ನಲ್ಲಿ ರನ್‌ಗಳು ಹರಿದುಬಂದವು. 100 ರನ್ ಹೊಡೆದ ಇನಿಂಗ್ಸ್‌ನಲ್ಲಿ ಅಷ್ಟೆ 147.05 ಸ್ಟ್ರೈಕ್ ರೇಟ್ ಇತ್ತು. 2017ರಲ್ಲಿ ಮುಂಬೈ ಇಂಡಿಯನ್ಸ್ ತಂಡದ ಪರವಾಗಿ ಅವರು ಅಂದುಕೊಂಡಷ್ಟು ಚೆನ್ನಾಗಿ ಆಡಲು ಆಗದೇಹೋದರೂ ರಾಯಸ್ತಾನ ರಾಯಲ್ಸ್ ತಂಡದ ಪರವಾಗಿ ಆಡುತ್ತಿರುವ ರೀತಿ ನೋಡಿದರೆ, ಆರಂಭಿಕ ಆಟಗಾರನಾಗಿ ಚುಟುಕು ಕ್ರಿಕೆಟ್‌ಗೆ ಹೇಳಿಮಾಡಿಸಿದಂತೆ ಕಾಣುತ್ತಿದ್ದಾರೆ.




ಪ್ರತಿಕ್ರಿಯಿಸಿ: feeaback@sudha.co.in

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65